C.C. No.225/22 P.W. 1 Dated : 22-06-2024.

ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು: ಶ್ರೀ. ಎಂ ಎಸ್ ಎಲ್ ವಕೀಲರಿಂದಃ

ಆರೋಪಿಗೆ ನನ್ನ ಬಳಿ ಸಾಲ ಕೇಳುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರಿದು ಆರೋಪಿಯು ತನ್ನ ವ್ಯವಹಾರದ ಅಭಿವೃದ್ಧಿಗಾಗಿ ಹಣದ ಅವಶ್ಯಕತೆ ಇರುತ್ತದೆ ಎಂದು ನನ್ನ ಬಳಿ ಹಣ ಕೇಳಿರುತ್ತಾರೆ. ಆರೋಪಿಯು ಮೆಡಿಕಲ್ ರೆಪ್ರೆಸೆಂಟಿಟಿವ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದರೆ ಸರಿ. ಅವರು ಉತ್ತಮ ವೇತನ ಪಡೆಯುತ್ತಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯು ಹಾಸನದ ಹೊಸಲೈನ್ ರಸ್ತೆಯಲ್ಲಿ ವಾಸವಾಗಿರುತ್ತಾರೆ. ಆರೋಪಿಯು ಆ ವಿಳಾಸದಲ್ಲಿ ವಾಸವಾಗಿರುವುದಿಲ್ಲ ಎಂದರೆ ಸರಿಯಲ್ಲ. ಅದು ಅವರ ಅಣ್ಣನ ಮನೆಯಾಗಿರುತ್ತದೆ ಎಂದರೆ ಸರಿಯಲ್ಲ. ನೋಟೀಸ್ ನ್ನು ಪಿರ್ಯಾದಿಯಲ್ಲಿ ನಮೂದಿಸಿರುವ ಆರೋಪಿಯ ವಿಳಾಸಕ್ಕೆ ಕಳುಹಿಸಿರುತ್ತೇನೆ. ನಿಪಿ-5 ರಲ್ಲಿರುವ ಸಹಿ ಆರೋಪಿಯದ್ದಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ-1 ರಲ್ಲಿನ ಸಹಿ ಆರೋಪಿಯದ್ದಾಗಿರುತ್ತದೆ. ನಿಪಿ-1 ಮತ್ತು 5 ರಲ್ಲಿನ ಸಹಿಗಳಲ್ಲಿ ವ್ಯತ್ಯಾಸ ಇದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-1 ರಲ್ಲಿನ ಅಕ್ಷರ ಹಾಗೂ ಸಹಿಯಲ್ಲಿನ ಶಾಹಿಯ ವ್ಯತ್ಯಾಸ ಇದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-1 ನ್ನು ಆರೋಪಿಯೇ ನನಗೆ ನೀಡಿರುತ್ತಾರೆ. ಆರೋಪಿಯೇ ನಿಪಿ-1 ನ್ನು ಮೊದಲೇ ಬರೆದುಕೊಂಡು ಬಂದಿದ್ದು ನನ್ನ ಸಮಕ್ಷಮ ನಿಪಿ-1 ಕ್ಕೆ ಅವರು ಸಹಿ ಮಾಡಿರುವುದಿಲ್ಲ. ನಿಪಿ-1 ನ್ನು ನಾನೇ ಭರ್ತಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ಹಾಸನ ನಗರ ವಿದ್ಯುತ್ ನಗರ ಸಾಲಗಾಮೆ ರಸ್ತೆ, 5 ನೇ ಕ್ರಾಸ್ ನಲ್ಲಿ ವಾಸವಾಗಿರುತ್ತಾರೆ ಎಂದರೆ ಸಾಕ್ಷಿಯು ಆರೋಪಿಯು ಈಗ ವಾಸವಾಗಿರುವ ವಿಳಾಸ ನನಗೆ ತಿಳಿದಿರುವುದಿಲ್ಲ ಎಂದು ಉತ್ತರಿಸುತ್ತಾರೆ. ದಿಃ 22-02-2021 ರಂದು ಕೊರೋನಾ ಖಾಯಿಲೆ ಇತ್ತು ಎಂದರೆ ಸಾಕ್ಷಿಯು ಆ ಸಮಯದಲ್ಲಿ ಯಾವುದೇ ನಿರ್ಬಂಧ ಇರಲಿಲ್ಲ ಎಂದು ನುಡಿಯುತ್ತಾರೆ. ಆರೋಪಿಯ ಸ್ವಂತ ಸ್ಥಳ ಹೊಳೆನರಸೀಪಪುರ ತಾ. ಹಳೇಕೋಟೆ ಹೋಬಳಿ,

ಕರುವನಹಳ್ಳಿ ಗ್ರಾಮ ಎಂದರೆ ನನಗೆ ಗೊತ್ತಿಲ್ಲ. ಆರೋಪಿಗೆ 6 ಎಕರೆ ತೆಂಗಿನ ತೋಟ 2 ಎಕರೆ ತರಿ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ನಾನು ಮಾರುಕಟ್ಟೆಯಲ್ಲಿ ಹಣಕಾಸಿನ ವ್ಯವಹಾರ ಮಾಡುತ್ತಿದ್ದಾಗ ಆರೋಪಿಯು ನನ್ನ ಜೊತೆ ಸೇರಿಕೊಂಡು ಅವರು ಸಹ ಹಣಕಾಸಿನ ವ್ಯವಹಾರದಲ್ಲಿ ಪಪಾಲುದಾರರಾಗಲು ನನ್ನ ಬಳಿ ಬರುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿಯು ಪ್ರತಿ ತಿಂಗಳು ರೂ. 50,000.00 ಗಳಂತೆ 2 ತಿಂಗಳಿಗೆ 1,00,000.00 ಹಣವನ್ನು ಹಣಕಾಸಿನ ವ್ಯವಹಾರದಲ್ಲಿ ನಾನು ತೊಡಗಿಸಿಕೊಳ್ಳುತ್ತೇನೆ ಎಂದು ಕೇಳಿದ್ದರು ಎಂದರೆ ಸರಿಯಲ್ಲ. ಅದರಂತೆ ಆರೋಪಿಯು ತಲಾ ರೂ. 50,000.00 ಗಳಿಗೆ ಎರಡು ಸಹಿ ಮಾಡಿದ ಖಾಲಿ ಚೆಕ್ ಗಳನ್ನು ನನಗೆ ನೀಡಿ ರೂ. 1,00,000.00 ಗಳಂತೆ ಹಣಕಾಸಿನ ವ್ಯವಹಾರದಲ್ಲಿ ತೊಡಗಿಸಿಕೊಳ್ಳುವಂತೆ ನನಗೆ ಎರಡು ಚೆಕ್ ಗಳನ್ನು ಆರೋಪಿ ನೀಡಿದ್ದರು ಎಂದರೆ ಸರಿಯಲ್ಲ. ಸದರಿ ರೂ. 1,00,000.00 ಗಳನ್ನು ತೊಡಗಿಸಿಕೊಳ್ಳಿ ನಿಮಗೆ ರೂ. 5,000.00 ಬಡ್ಡಿ ಹಣವು ಬರುವುದು ಅದನ್ನು ನೀವು ಚೀಟಿ ವ್ಯವಹಾರಕ್ಕೆ ತೊಡಗಿಸಿಕೊಳ್ಳಿ ಎಂದು ನಾನು ಆರೋಪಿಗೆ ತಿಳಿಸಿದೆನು ಎಂದರೆ ಸರಿಯಲ್ಲ. ಅದರಂತೆ ಆರೋಪಿಯು 461785 ಮತ್ತು 461786 ರ ಎರಡು ಚೆಕ್ ಗಳನ್ನು ನನಗೆ ನೀಡಿದ್ದರು ಎಂದರೆ ಸರಿಯಲ್ಲ. ನನಗೆ ಸಂಬಳ ಬಂದ ನಂತರ ನಿಮಗೆ ಫೋನ್ ಮಾಡಿ ತಿಳಿಸುತ್ತೇನೆ. ಆನಂತರ ನಾನು ಹೇಳಿದ ಒಂದು ಚೆಕ್ ನ ಮೂಲಕ ರೂ. 50,000.00 ಗಳನ್ನು ಪಡೆದುಕೊಳ್ಳಿ ಎಂದು ಆರೋಪಿ ನನಗೆ ತಿಳಿಸಿದರು ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ನೀಡುವ ಉದ್ದೇಶದಿಂದ ಆರೋಪಿ ಸಹಿ ಮಾಡಿ ನೀಡಿದ ಚೆಕ್ ಗಳನ್ನು ನಾನು ದುರುಪಯೋಗ ಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ಆರ್ಥಿಕವಾಗಿ ಸಧೃಡವಾಗಿದ್ದು ಅವರಿಗೆ ನನ್ನಿಂದ ಸಾಲ ಪಡೆದುಕೊಳ್ಳುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯು ತನ್ನ ಅಣ್ಣನ ಮನೆಗೆ ನೋಟೀಸ್ ಜಾರಿಯಾದ ನಂತರ ಮರು ಉತ್ತರವನ್ನು ಸಹ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-6 ರಲ್ಲಿರುವ ಅಂಶಗಳನ್ನು ನಾನು ತಿಳಿದುಕೊಂಡಿರುವುದಿಲ್ಲ. ಆರೋಪಿಗೆ ರೂ. 7,85,000.00 ಗಳನ್ನು ನೀಡುವಷ್ಟು ನಾನು ಆರ್ಥಿಕವಾಗಿ ಶಕ್ತನಲ್ಲ ಎಂದರೆ ಸರಿಯಲ್ಲ.

( ಮುಂದುವರಿದ ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದು, ಸಮಯ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ .

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಆಲೂರು.